ಸುಳ್ಯ ಪಟ್ಟಣ ಒಳಚರಂಡಿ ಯೋಜನೆ ಬಗ್ಗೆ

159 ಶ್ರೀ ಬಿ. ಹುರಪ್ಪ (ಸುಳ್ಯ)-- ಮಾನ್ಯ ನಗರಾಭಿವೃದ್ಧಿ ಮತ್ತು ಅಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೆ ?

ಅ) ಸುಳ್ಯ ನಗರಕ್ಕೆ ಒಳಚರಂಡಿ ವ್ಯವಸ್ಥೆ ಮಾಡಲು ಸರಕಾರದ ಮುಂದೆ ಸಲಹೆ ಏನಾದರು ಇದೆಯೇ ;

ಆ) ಹಾಗಿಲ್ಲದಿದ್ದಲ್ಲಿ ಈ ಬಗೆ ಸರಕಾರದವರು ಏನು ಕ್ರಮ ಕೈಗೊಳ್ಳುವರು ?

ಶ್ರೀ ಎಂ. ಚಂದ್ರಶೇಖರ್.--ನಗರಾಭಿವೃದ್ಧಿ ಮತ್ತು ಅಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು.--

ಅ) ಇಲ್ಲ

ಆ) ನೀರು ಸರಬರಾಜು ಕೈಪಿಡಿಯ ಪ್ರಕಾರ ದಿನಂಪ್ರತಿ ತಲಾ ಸುಮಾರು 25-30 ಗ್ಯಾಲನ್ ನೀರು ಸರಬರಾಜು ಇದ್ದ ಪಕ್ಷದಲ್ಲಿ ಮಾತ್ರ ಒಳಚರಂಡಿ ಯೋಜನೆಯನ್ನು ತೆಗೆದುಕೊಳ್ಳಬಹುದು. ಆದರೆ ಈಗ ಸುಳ್ಯ ಪಟ್ಟಣಕ್ಕೆ ದಿನಂಪ್ರತಿ ತಲಾ 10 ಗ್ಯಾಲನ್ ನೀರು ಮಾತ್ರ ಒದಗಿಸಲಾಗುತ್ತಿದೆ. ಆದುದರಿಂದ ನೀರು ಸರಬರಾಜು ಅಭಿವೃದ್ಧಿ ಯೋಜನೆ ಕಾರ್ಯಗತವಾದ ನಂತರ ಒಳಚರಂಡಿ ವ್ಯವಸ್ಥೆ ಯೋಜನೆಯನ್ನು ರೂಪಿಸಲಾಗುವುದು.

ಶ್ರೀ ಬಿ. ಹುರ್ರಪ್ಪ.—ಸುಳ್ಯ ಕ್ಷೇತ್ರದಲ್ಲಿ ಸರಬರಾಜು ಆಗೂವ ನೀರಿನಲ್ಲಿ ಮಲಮೂತ್ರ ಇದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಚಂದ್ರಶೇಖರ್.—ಆ ತರಹ ದೂರುಗಳು ಬಂದಿಲ್ಲ ಸರ್ಕಾರದ ವತಿಯಿಂದ ಹೇಳುವುದಾದರೆ, ಶುದ್ಧೀಕರಣವಾದ ನೀರನ್ನು ನಾವು ಜನರಿಗೆ ಕೊಡುತ್ತಿದ್ದೇವೆ. ಇದಕ್ಕಾಗಿ 1.22 ಲಕ್ಷ ರೂ ಮಂಜೂರು ಮಾಡಲಾಗಿದ್ದು ಶುದ್ಧೀಕರಣ ಕಾರ್ಯ ನಡೆಯುತ್ತಿದೆ. ಒಟ್ಟಿನಲ್ಲಿ ನೀರಿನ ಅಶುದ್ಧೀಕರಣದ ಬಗ್ಗೆ ಯಾವುದೇ ದೂರುಗಳು ಸರ್ಕಾರಕ್ಕೆ ಬಂದಿಲ್ಲ

ಶ್ರೀ ಕೆ. ರಾಮಭಟ್.—ಸ್ವಾಮಿ, ಅಲ್ಲಿ ಬರತಕ್ಕ ನೀರನ್ನು ಸ್ಯಾಂಪಲ್‌ಗೆ ಕಳಿಸಿದ್ದೇನೆ. ಆದು ಕುಡಿಯುವುದಕ್ಕೆ ಅಯೋಗ್ಯ ನೀರು ಎಂದು ಅಲ್ಲಿಂದ ರಿಪೋರ್ಟ್ ಬಂದಿದೆ. ಆದರೆ ವಿಧಿಯಿಲ್ಲದೆ ಜನರು ಆದೇ ನೀರನ್ನು ಕುಡಿಯುತ್ತಿದ್ದಾರೆ. ಇದರ ಬಗ್ಗೆ ತಾವು ಪರಿಶೀಲಿಸುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಇದನ್ನು ನಾನು ಪರಿಶೀಲಿಸುತ್ತೇನೆ.

ಬೀದರ್ ಜಿಲ್ಲೆ ಹುಲಸೂರು ವಿಧಾನ ಸಭಾ ಕ್ಷೇತ್ರದ ಹಳ್ಳಿಗಳ ವಿದ್ಯುದ್ದೀಕರಣ

160 ಶ್ರೀ ರಾಮಚಂದ್ರ ವೀರಪ್ಪ (ಹುಲಸೂರು).—ಮಾನ್ಯ ವಿದ್ಯುಚ್ಛಕ್ತಿ ಮತ್ತು ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೆ .--

ಅ) ಬೀದರ್ ಜಿಲ್ಲೆ ಹುಲಸೂರು ವಿಧಾನ ಸಭಾ ಕ್ಷೇತ್ರದ ಎಷ್ಟು ಹಳ್ಳಿಗಳನ್ನು ಇಲ್ಲಿಯವರೆಗೆ ವಿದ್ಯುದ್ದೀಕರಿಸಲಾಗಿದೆ;

ಆ) ಈ ಕ್ಷೇತ್ರದ ಎಲ್ಲಾ ಹಳ್ಳಿಗಳನ್ನು ವಿದ್ಯುದ್ದೀಕರಿಸಲು ಎಷ್ಟು ಕಾಲ ಬೇಕಾಗುವುದು ?

ಶ್ರೀ ಜೆ. ಎಚ್. ಪಟೀಲ್ (ವಿದ್ಯುಚ್ಛಕ್ತಿ ಮತ್ತು ಅಬಕಾರಿ ಮಂತ್ರಿಗಳು).—(ಅ) ಜನಗಣತಿಯಾಗಿ ಹಾಗೂ ಇನಸಿತ 146 ಹಳ್ಳಿಗಳು.

ಆ) ಉಳಿದ ಮುಖೇಡ ಎಂಬ ಒಂದು ಹಳ್ಳಿಯ ವಿದ್ಯುದ್ದೀಕರಣವು ಮಹಾರಾಷ್ಟ್ರ ವಿದ್ಯುತ್ ಮಂಡಳಿಯಿಂದ ವಿದ್ಯುತ್ ಸರಬರಾಜು ಪಡೆದು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜೆ. ಹೆಚ್. ಪಟೀಲ್.--ಮಾನ್ಯ ಉಪಾಧ್ಯಕ್ಷರೆ, ಬೀದರ್ ಜಿಲ್ಲೆಯ ಹುಣಸೂರು ವಿಧಾನಸಭಾ ಕ್ಷೇತ್ರದ ಎಷ್ಟು ಹಳ್ಳಿಗಳಿಗೆ ಇದುವರೆಗೆ ವಿದ್ಯುದ್ದೀಕರಿಸಲಾಗಿದೆ, ಎಂದು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿರುತ್ತಾರೆ. ಅದಕ್ಕೆ ಉತ್ತರ ಈ ರೀತಿ ಇದೆ. ಒಟ್ಟು 147 ಗ್ರಾಮಗಳ ಪೈಕಿ 146 ಗ್ರಾಮಗಳಿಗೆ ವಿದ್ಯುದ್ದೀಕರಣಗೊಳಿಸಲಾಗಿದೆ. ಇನ್ನುಳಿದ "ಮುಖೇಡ" ಎನ್ನುವ ಒಂದು ಗ್ರಾಮಕ್ಕೆ ವಿದ್ಯುದ್ದೀಕರಣವನ್ನು ಮಾಡಿಲ್ಲ. ಕಾರಣ ಈ ಗ್ರಾಮ ಮಹಾರಾಷ್ಟ್ರದ ಕಡೆಗೆ ಹೆಚ್ಚಿನ ಭಾಗ ಹೋಗಿದೆ. ಇದಕ್ಕೆ ವಿದ್ಯುದ್ದೀಕರಣ ಮಾಡಬೇಕಾದರೆ ನಮ್ಮ ಕರ್ನಾಟಕದ ಕಡೆಯಿಂದ 11 ಕಿಲೋಮೀಟರ್ ದೂರ ಹಾಕಬೇಕು ಮಹಾರಾಷ್ಟ್ರದ ಕಡೆಯಿಂದ ಆದರೆ ಕೇವಲ 1 ½ ಕಿಲೋಮೀಟರ್ ದೂರ ಹಾಕಬೇಕಾಗುತ್ತದೆ. ಆದ್ದರಿಂದ ಈ ವಿಚಾರವನ್ನು ಮಹಾರಾಷ್ಟ್ರ ಸರ್ಕಾರದವರಿಗೆ ತಿಳಿಸಿದ್ದೇವೆ.